'ಅಂತೂ ಪ್ರಖ್ಯಾತ ನಟನಿಗೆ ನನ್ನಂತಹ ಜೂನಿಯರ್ ಆರ್ಟಿಸ್ಟ್ ಗುರುತು ಸಿಕ್ಕಿತಲ್ಲ?' ಎಂದು ವ್ಯಂಗ್ಯವಾಗಿ ಕೇಳಿದಳು.

ಆತ ಉತ್ತರಿಸಲು ಪ್ರಯತ್ನಿಸಲಿಲ್ಲ.

'ಆ ದಿನ ನೆನಪಿದೆಯ? ನನಗೆ ಇಪ್ಪತ್ತು ವರ್ಷ ಪ್ರಾಯ ಇರಬಹುದು. ಎಲ್ಲ ತಳವರ್ಗದ ಮನೆಯ ಬಂಧುವಾಗಿರುವ ಬಡತನದ ಸಮಸ್ಯೆಯೆ ನನ್ನನ್ನು ಕಿತ್ತು ತಿನ್ನುತ್ತಿತ್ತು. ಅಷ್ಟೇನೂ ಓದಿಕೊಂಡಿರದಿದ್ದ, ಯಾವ ವೃತ್ತಿ ತರಬೇತಿಯೂ ಇಲ್ಲದ ನಾನು ಕನಿಷ್ಠ ಟೈಲರಿಂಗ್ ಕೆಲಸಕ್ಕೂ ನಾಲಾಯಕ್ ಆಗಿದ್ದೆ. ಅಂದಗಾತಿ ಅನ್ನೋ ನಂಬಿಕೆಯಲ್ಲಿದ್ದ ನನಗೆ ಮನೆಕೆಲಸಕ್ಕೆ ಪಾತ್ರೆ ತೊಳೆಯಲು ಹೋಗಲು ಇಷ್ಟ ಇರಲಿಲ್ಲ. ನನ್ನಂತಹ ಯುವತಿಗೆ ಸಿನಿಮಾ ರಂಗದಲ್ಲಿ ಕನಿಷ್ಠ ಹೀರೋಯಿನ್ ಹಿಂದೆ ಸುತ್ತುವ ಅಥವಾ ಗುಂಪಿನಲ್ಲಿ ಡ್ಯಾನ್ಸ್ ಮಾಡುವ ಜೂನಿಯರ್ ಆರ್ಟಿಸ್ಟ್ ಕೆಲಸವಾದರೂ ಸಿಕ್ಕಬಹುದು ಅಂದುಕೊಂಡಿದ್ದೆ. ನನ್ನ ಅಂದ ನೋಡಿದ ಒಬ್ಬ ನಿರ್ಮಾಪಕ ನೀನು ನಟಿಸುತ್ತಿದ್ದ ಸಿನಿಮಾದಲ್ಲಿ ತಂಗಿಯ ಪಾತ್ರಕ್ಕೆ ಕರೆದುಕೊಂಡು ಬಂದಿದ್ದ. ಆದರೆ, ನೀನು ನನಗೆ ಅವಮಾನ ಮಾಡುವಂತಹ ಮಾತಾಡಿದ್ದೆ. ನನ್ನ ಆತ್ಮಗೌರವಕ್ಕೆ ಧಕ್ಕೆ ಆದ ಕಾರಣ ನಾನೂ ತಿರುಗಿಬಿದ್ದೆ. ಕೊನೆಗೆ ಕೋಪದಿಂದ ಉದ್ರಿಕ್ತನಾದ ನೀನು, ನಿನ್ನಂತಹವರಿಗೆ ಸಿನಿಮಾ ಯಾಕೆ? ಎಲ್ಲಾದರೂ ಬೀದಿ ಬದಿ ನಿಂತು ಗಿರಾಕಿ ಹುಡುಕಿಕೋ ಎಂದು ಈ ಸಮಾಜದಲ್ಲಿ ಯಾರೂ ಯಾವ ಹೆಣ್ಣಿಗೂ ಕೊಡಬಾರದ ಅಸಹ್ಯಕರ ಸಲಹೆ ಕೊಟ್ಟೆ. ಅದು ಅಂದಿನ ನಿನ್ನ ಅಹಂಕಾರಕ್ಕೆ ತಕ್ಕುದಾಗೇ ಇತ್ತು... ನೆನಪಿದೆ ತಾನೇ?

ಇವತ್ತೂ ನೀನು ನನ್ನನ್ನು ಯಾವುದೋ ಪಿಕಪ್ ಅಂತ ಭಾವಿಸಿ ನಿಂತಿರಬಹುದು. ಅಂದಿಗೂ ಇಂದಿಗೂ ನಾನೂ ಬದಲಾಗಿದ್ದೀನಿ. ಅವತ್ತಿನ ಬಳುಕುವ ದೇಹ ಈಗ ಉಳಿದಿಲ್ಲ. ವಯಸ್ಸಿಗೆ ತಕ್ಕಂತೆ ದಪ್ಪ ಹೆಂಗಸಾಗಿದ್ದೀನಿ. ನೀನೂ ಅಷ್ಟೆ ಈಗ ಯಾರಾದರೂ ಗುರುತು ಹಿಡಿಯೊ ಪರಿಸ್ಥಿತಿಯಲ್ಲಿಲ್ಲ. ನನ್ನ ಬದುಕಿನಲ್ಲಿ ಕೆಟ್ಟ ತೀರ್ಮಾನಗಳನ್ನೂ ದುರದೃಷ್ಟದ ನಿರ್ಧಾರಗಳನ್ನೂ ತೆಗೆದುಕೊಳ್ಳಲು ಕಾರಣನಾಗಿದ್ದ ನಿನ್ನನ್ನು ಮರೆಯಲೇಬಾರದೆಂದು ಅಂದುಕೊಂಡಿದ್ದೆ. ಅದಕ್ಕಾಗಿ ನಿನ್ನ ಮುಖವನ್ನು ಆಗಾಗ ನೆನೆಸಿಕೊಳ್ಳುತ್ತಾ ಮನಸ್ಸಿನಿಂದ ಮರೆಯಾಗದಂತೆ ಕಾಪಾಡಿಕೊಳ್ಳುತ್ತಿದ್ದೆ. ಆದರೂ ನೀನು ಈಗ ಇರುವ ದರಿದ್ರ ಸ್ಥಿತಿಯಲ್ಲಿ ನನಗೂ ನಿನ್ನನ್ನು ಗುರುತು ಹಿಡಿಯಲು ಸಾಧ್ಯವಾಗ್ತಿರಲಿಲ್ಲವೋ ಏನೋ? ಈಗೊಂದು ಎರಡುಮೂರು ತಿಂಗಳ ಹಿಂದೆ ಪೇಪರಿನಲ್ಲಿ ನಿನ್ನ ಸಂದರ್ಶನ ಬಂದಿತ್ತಲ್ಲ? ನಿನ್ನನ್ನು ಇಂಡಸ್ಟ್ರಿ ಮರೆತೇಬಿಟ್ಟಿದೆ. ತನ್ನಿಂದ ದುಡ್ಡಾಗುವಾಗ ತನ್ನ ಹಿಂದೆ ಸುತ್ತುತ್ತಿದ್ದ ನಿರ್ಮಾಪಕರೆಲ್ಲ ನನ್ನ ಮರೆತುಬಿಟ್ಟಿದ್ದಾರೆ ಅಂತ ಗೋಳಾಡಿದ್ದೆಯಲ್ಲ, ಅದನ್ನು ಓದಿದ್ದೆ. ಅಲ್ಲಿ ನಿನ್ನ ಈ ಬೊಚ್ಚುಬಾಯಿ, ವಿಗ್ಗಿಲ್ಲದ ಬೋಳುತಲೆಯ ಫೋಟೊ ನೋಡಿದ್ದಕ್ಕೆ ಈಗ ನಿನ್ನ ಗುರುತು ಸಿಕ್ಕಿತು. ಇಲ್ಲವಾದರೆ ನೀನೆಲ್ಲಿ ಗುರುತಾಗಬೇಕು?' ಎಂದು ಹಂಗಿಸಿದಳು.

'ನನ್ನನ್ನು ಎಲ್ಲ ಮರೆತೇಬಿಟ್ಟಿದ್ದಾರೆ ಅಂತ ಪೇಪರಿನವನ ಎದುರು ಗೋಳಾಡುತ್ತೀಯಲ್ಲ ಜನ ನೆನಪಿಟ್ಟುಕೊಳ್ಳುವಂತಹ ಕೆಲಸ ಏನು ಮಾಡಿದ್ದೀಯ? ಈಗಿನ ಆರ್ಟಿಸ್ಟ್‌ಗಳನ್ನು ನೋಡು. ಸಾಕಷ್ಟು ಹಣ ಸಿಕ್ಕಕೂಡಲೆ ಒಂದು ಸಂಸ್ಥೆಯೋ ಪ್ರತಿಷ್ಠಾನವೋ ಮಾಡಿಕೊಂಡು ತಮ್ಮ ಕೈಲಾದಷ್ಟು ಸಮಾಜಕ್ಕೆ ಋಣ ಸಲ್ಲಿಸುತ್ತಾರೆ. ಪ್ರಾಣಿಗಳನ್ನು ದತ್ತು ತೆಗೆದುಕೊಂಡು ಪ್ರೀತಿ ತೋರಿಸ್ತಾರೆ, ಭಾಷಾಸಮಸ್ಯೆ, ನೀರಿನ ಸಮಸ್ಯೆ ಬಂದಾಗ ಹೋರಾಟಕ್ಕೆ ರಸ್ತೆಗೆ ಬರ್ತಾರೆ. ಹೇಗೋ ಜನರಿಂದ ಬಂದ ಹಣ ಮತ್ತು ಪ್ರೀತಿಗೆ ಬದಲಾಗಿ ಅವರ ಕೈಲಾದ ಒಂದಷ್ಟು ಜನರಿಗೆ ಹಿಂದಿರುಗಿಸುತ್ತಾರೆ. ನೀನು ಶ್ರೀಮಂತಿಕೆಯಿದ್ದಾಗ ಯಾರಿಗಾದರೂ ಸಹಾಯ ಮಾಡಿದ ಒಂದಾದರೂ ಉದಾಹರಣೆ ಇದೆಯ? ಅಥವ ಕನಿಷ್ಠ ಯಾರಿಗಾದರೂ ಗೌರವ ಕೊಟ್ಟದ್ದು ಇದೆಯ?' ಎಂದು ಕೇಳಿದಳು.

ಅವನು ಮೌನವಾಗಿ ಕುಳಿತಿದ್ದ. ಅವನಿಂದ ಉತ್ತರ ಪಡೆಯಲೇಬೇಕೆಂದು ನಿರ್ಧರಿಸಿದಂತೆ